# ಬ್ರಹ್ಮತಾಲ್: ಪ್ರಕೃತಿಯ ತಾಳ

ನಮ್ಮ ಗೈಡ್‌ಗೆ ಆ ಕಾಡಿನ ಪ್ರಾಣಿಗಳ ಬಗ್ಗೆ ವಿಚಾರಿಸಿದೆ. 'ಈ ಕಾಡಿನಲ್ಲಿ ಅಂತಹ ಪ್ರಾಣಿಗಳೇನೂ ಇಲ್ಲ, ಇದ್ದರೆ ಕರಡಿ ಮತ್ತು ಜಿಂಕೆ ಜಾತಿಯ ಪುಟ್ಟ ಪ್ರಾಣಿಗಳು ಇರಬಹುದು' ಎಂದಾಗ ಎದೆ ಧಸಕ್ಕೆಂದಿತು.

ಚಿತ್ರ–ಲೇಖನ: **ಸಚಿತ್ ರಾಜು**







ಬ್ರಹ್ಮತಾಲ್

ನೈನಿತಾಲ್ ಜಿಲ್ಲೆಯ ಕಥ್ ಗೋದಾಮ್ ರೈಲು ನಿಲ್ದಾಣದಲ್ಲಿ ಬಂದಿಳಿದಾಗ ಮುಂಜಾನೆ ಸುಮಾರು 5.30. ಕೈಗವಸು, ಟೋಪಿ, ಜಾಕೆಟ್ ಧರಿಸಿದ್ದರೂ ನಮ್ಮನ್ನು ಸ್ವಾಗತಿಸಿದ್ದು ಮೈಕೊರೆಯುವ ಚಳಿ. '**you guys up for the hike?**' ಎನ್ನುತ್ತ ಜರ್ಮನಿಯ ಪ್ರವಾಸಿಗ ಪಾಲ್ ಎದುರಾದ. ನಮ್ಮೊಂದಿಗೆ ಮಾತಿಗಿಳಿದ ಅವನ ಒಡನಾಟದಿಂದ ನಮಗೆ ತಿಳಿದದ್ದು ಅವನು ನಮ್ಮ ದೇಶವನ್ನು ನಮಗಿಂತಲೂ ಹೆಚ್ಚು ಸುತ್ತಿದ್ದಾನೆ ಎನ್ನುವುದು. ಅಷ್ಟರಲ್ಲಿಯೇ ನಮ್ಮ ಟೆಂಪೋ ಟ್ರಾವೆಲರ್‌ನ ಚಾಲಕ ನಮ್ಮ ಬಳಿ ಬಂದು 'ಆಪ್ ಲೋಗ್ ಕರ್ನಾಟಕ ಸೇ ಹೈ ನಾ?' ಎಂದು ನಮ್ಮ ಗುರುತನ್ನು ಖಚಿತಪಡಿಸಿಕೊಂಡು, ಆಗಲೇ ತಡವಾಗಿದೆ ಎಂದು ನಮ್ಮನ್ನು ಹೊರಡಿಸಿಯೇಬಿಟ್ಟ.

ನಮ್ಮ ತಂಡದಲ್ಲಿ ಒಂದಿಬ್ಬರನ್ನು ಹೊರತುಪಡಿಸಿ ನಾವೆಲ್ಲರೂ ಬಾಲ್ಯ ಸ್ನೇಹಿತರೇ ಆದ್ದರಿಂದ ದಾರಿಯುದ್ದಕ್ಕೂ ಮೋಜು ಮಸ್ತಿಗೇನೂ ಕೊರತೆಯಿರಲಿಲ್ಲ. ನಾವೆಲ್ಲರೂ ಬೇರೆ ಬೇರೆ ಕ್ಷೇತ್ರಗಳಲ್ಲಿ ಬೇರೆ ಬೇರೆ ಹುದ್ದೆಯಲ್ಲಿದ್ದರೂ ಹೀಗೆ ಒಟ್ಟಿಗೆ ಪ್ರಯಾಣ ಮಾಡುತ್ತಿದ್ದುದು ನಾವು ಶಾಲೆಯಿಂದ ಹೊರಟ ಯಾವುದೋ ಶೈಕ್ಷಣಿಕ ಪ್ರವಾಸವನ್ನು ನೆನಪಿಸುವಂತಿತ್ತು.

ಆರು ತಿಂಗಳ ಹಿಂದಿನ ನಮ್ಮ ತಂಡದ ಲೇಹ್–ಲದಾಖ್ ಪ್ರವಾಸದ ನಂತರ ಇದು 2ನೇ ಪ್ರವಾಸವಾಗಿತ್ತು. ಲೋಹಜಂಗ್ ಸಮೀಪಿಸುತ್ತಿದ್ದಂತೆ ನಮ್ಮ ಪಯಣ ಹಿಮಾಲಯದ ಶಿವಾಲಿಕ್ ಪರ್ವತ ಶ್ರೇಣಿಯ ಮೂಲಕ ಸಾಗುತ್ತಿತ್ತು. ಅಲ್ಲಿ ಕಾಣುತ್ತಿದ್ದ ದೃಶ್ಯವೈಭವ ನಮ್ಮ ಮುಂದಿನ ಚಾರಣದ ಟ್ರೇಲರ್‌ನಂತಿತ್ತು. ನಾವು ಸಂಜೆಯ ಹೊತ್ತಿಗೆ ಲೋಹಜಂಗ್ ತಲುಪಿದಾಗ ನಮ್ಮ ಹೋಟೆಲ್‌ನ ಮುಂದಿದ್ದ ನಂದಾಗುಂಟಿ ಪರ್ವತ ಹೊಂಬಣ್ಣದಿಂದ ಕಂಗೊಳಿಸುತ್ತಾ ನಮ್ಮನ್ನು ಸ್ವಾಗತಿಸುತ್ತಿತ್ತು.